ಕರ್ನಾಟಕ ವಿಧಾನ ಸಭೆ

ಬುಧವಾರ, 8ನೇ ಫೆಬ್ರುವರಿ ತಿಂಗಳು 1984

ವಿಧಾನ ಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ 11 ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಅವರು ಪೀಠವನ್ನು ಅಲಂಕರಿಸಿದರು.

1. ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು.— ಈ ಮನೆಯ ಮಾಜಿ ಸದಸ್ಯರಾದ ಶ್ರೀ ಕೆ. ಕೃಷ್ಣಪ್ಪನವರು ದಿನಾಂಕ 7-2-1984 ರಂದು ವಿಧಿವಶರಾದರು ಎಂದು ತಿಳಿಸಲು ನನಗೆ ವಿಷಾದವಾಗುತ್ತದೆ. ಅವರು ಮೂರನೇ ಸಾರ್ವತ್ರಿಕ ಚುನಾವಣೆಯಲ್ಲಿ ಬಸವನಗುಡಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. 1962 ರಿಂದ 1970 ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಈ ಮೊದಲು 1966 ರಲ್ಲಿ ಬೆಂಗಳೂರಿನ ಮಹಾನಗರಸಭೆಯ ಮೇಯರ್ ಆಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ನಿಧನ ಹೊಂದಿರುವ ಕಾರಣ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ನಾವು ಒಂದು ನಿಮಿಷ ಕಾಲ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಒಂದು ನಿಮಿಷ ಎದ್ದುನಿಂತು ಮೌನವನ್ನು ಆಚರಿಸಿತು)

2. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ : ರಾಜ್ಯದಲ್ಲಿರುವ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹಿಂದುಳಿದ ಪಂಗಡದ ವಿದ್ಯಾರ್ಥಿಗಳಿಗೆ ಹಂಚಲಾದ ಸರ್ಕಾರಿ ಸೀಟುಗಳು.

ಪ್ರಶ್ನೆ. 202 (606) ಶ್ರೀ ಓಬಣ್ಣರಾಜು (ಚಾಮರಾಜ ಪೇಟೆ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 1979, 1980, 1981, 1982 ಮತ್ತು 1983ನೇ ಸಾಲಿನಲ್ಲಿ ಹಿಂದುಳಿದ ಬುಡಕಟ್ಟು (ಬಿಟಿ) ವಿದ್ಯಾರ್ಥಿಗಳಿಗೆ ನೀಡಲಾದ ಸರಕಾರಿ ಪ್ರವೇಶಗಳ ಸಂಖ್ಯೆ ಮತ್ತು ಅಂಥ ವಿದ್ಯಾರ್ಥಿಗಳ ಹೆಸರುಗಳು (ವರ್ಷವಾರು ಮತ್ತು ಜಾತಿವಾರು ವಿವರಗಳನ್ನು ನೀಡುವುದು);

ಆ) ಮೇಲ್ಕಂಡ ವಿದ್ಯಾರ್ಥಿಗಳ ಪಾಲಕರ, ಪೋಷಕರ ಹೆಸರು, ವಿಳಾಸ ಮತ್ತು ವೃತ್ತಿ ?

ಉತ್ತರ : ಶ್ರೀ ಬಿ. ರಾಚಯ್ಯ (ಮಾನ್ಯ ವಿದ್ಯಾಮಂತ್ರಿ).— ಅ) ಹಿಂದುಳಿದ ಬುಡಕಟ್ಟು (ಬಿಟಿ) ವಿದ್ಯಾರ್ಥಿಗಳಿಗೆ ಸರ್ಕಾರಿ ಪ್ರವೇಶಗಳನ್ನು ನೀಡಿದ ಅಂಕಿ ಅಂಶಗಳು ಈ ಕೆಳಗೆ ನಮೂದಿಸಲಾಗಿದೆ :

1. 1979-80 — 112, 2. 1980-81 — 1209, 3. 1981-82 — 107, 4. 1982-83 - 114 5. 1983-84—179. ಆ) ಮಾಹಿತಿ ತಕ್ಷಣಕ್ಕೆ ಲಭ್ಯವಿಲ್ಲ.

ಪ್ರಶ್ನೆ. 202 (606) ಶ್ರೀ ಎಂ. ಓಬಣ್ಣರಾಜು.— ನಿಮ್ಮ ಸಂಖ್ಯೆ ನನಗೆ ಬೇಕಾಗಿಲ್ಲ. ಈ ಬುಡಕಟ್ಟು ಜನಾಂಗದಲ್ಲಿ ಎಷ್ಟು ಉಪಜಾತಿಗಳಿವೆ ? ಯಾರ್ಯಾರಿಗೆ ಎಷ್ಟೆಷ್ಟು ಸೀಟುಗಳನ್ನು ಕೊಟ್ಟಿದ್ದೀರಿ ಎಂಬ ಮಾಹಿತಿ ನನಗೆ ಬೇಕಾಗಿದೆ. ದಯಮಾಡಿ ಇದನ್ನು ನನಗೆ ತರಿಸಿಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು).— ಈ ಮಾಹಿತಿ ಈಗ ಲಭ್ಯ ಇಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯ ಹೆಸರು ಮತ್ತು ಯಾವ್ಯಾವ ಪಂಗಡಗಳಿಗೆ ಸೇರಿದ್ದಾರೆ ಎನ್ನುವ ವಿವರ ಈಗ ಸರ್ಕಾರದ ಮಟ್ಟದಲ್ಲಿ ಇಲ್ಲ. ಪ್ರತಿಯೊಂದು ಕಾಲೇಜಿಗೂ ಬರೆದು ತರಿಸಬೇಕಾಗುತ್ತದೆ. ಇದನ್ನು ತರಿಸಿ ಕಳಿಸಿ ಕೊಡುತ್ತೇನೆ.

ವಿಷಯ : ಲಿಂಗಸುಗೂರು ತಾಲ್ಲೂಕಿನಲ್ಲಿ ಕುಡಿಯುವ ನೀರು ಸರಬರಾಜು ಯೋಜನೆ.

ಪ್ರಶ್ನೆ. 203 (639) ಶ್ರೀ ಬಸವರಾಜ ಪಾಟೀಲ್ ಅನ್ವರಿ (ಲಿಂಗಸಗೂರು).— ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—